ಎಂದು ಜಾಗರೂಕನಾಗಿ ಹೆಜ್ಜೆಯಿಡುತ್ತಿದ್ದ. ಅವನು ಹಾಕಿದ್ದ ಬೂಟುಗಳಿಗೆ ಸಾಕ್ಸ್ ಇರಲಿಲ್ಲ. ಈ ಮನುಷ್ಯನನ್ನು ತಾನು ಎಲ್ಲಿಯೋ ನೋಡಿದ್ದೇನೆ ಎಂದು ಅಜ್ಜಿಗೆ ಅನಿಸತೊಡಗಿತು. ತನ್ನ ಜೀವನಪೂರ್ತಿ ಆ ವ್ಯಕ್ತಿಯ ಪರಿಚಯ ಇದ್ದಂತೆ ಆಕೆಗೆ ಅನಿಸುತ್ತಿದ್ದರೂ ಯಾರೆಂದು ಹೊಳೆಯಲಿಲ್ಲ. ಸುಮ್ಮನಾದಳು. ಆ ವ್ಯಕ್ತಿ ಹೇಳಿದ: 'ಪಾಪ ಇಷ್ಟು ದೂರ ಬಿದ್ದಿದ್ದೀರಲ್ಲ... ಗಾಡಿ ಬಿದ್ದಿದ್ದನ್ನು ನೋಡಿದ್ರ ನೀವ್ಯಾರು ಜೀವಂತ ಇರಲಿಕ್ಕೆ ಶಕ್ಯ ಇರಲಿಲ್ಲ. ಪುಣ್ಯಕ್ಕೆ ಏನೂ ಆಗಿಲ್ಲ.'

ಮುದುಕಿ ಅಂದಳು: 'ನಮ್ಮ ಕಾರು ಎರಡು ಸಲ ಪಲ್ಟಿ ಆಯಿತು. ಆದ್ರೂ ನಮಗ ಏನೂ ಆಗಲಿಲ್ಲ...'

'ಓ, ಹೀರಮ್' ಆತ ಸ್ನೇಹಿತನನ್ನು ಕರೆದು ಕಾರು ಸ್ಟಾರ್ಟ್ ಆಗಬಹುದೇ ನೋಡು ಎಂದು ಸೂಚಿಸಿದ. ಅಷ್ಟರಲ್ಲಿ ಪುಟ್ಟ ಹುಡುಗ ಜಾನ್ ವೆಸ್ಲೆ ಅವನನ್ನು ಕೇಳಿದ: 'ನೀವೆಲ್ಲ ಬಂದೂಕು ಇಟ್ಟುಕೊಂಡಿದ್ದೀರಲ್ಲ, ಯಾಕ?' ತಮ್ಮ ಕೈಯಲ್ಲಿಯ ಬಂದೂಕಿನ ಬಗ್ಗೆ ಈ ಚೋಟು ಕೇಳುತ್ತಿರುವುದಕ್ಕೆ ಅವನಿಗೆ ಸಿಟ್ಟು ಬಂದಿತು. ಮಗುವಿನ ತಾಯಿಗೆ ಆತ ಹೇಳಿದ, 'ಈ ಮಕ್ಕಳು ಏನೇನಾದ್ರೂ ಪ್ರಶ್ನೆ ಕೇಳಿದ್ರ ನನಗ ಸಿಟ್ಟು ತಡಕೊಳ್ಳಲಿಕ್ಕೆ ಆಗೂದಿಲ್ಲ. ಅವರ ಬಾಯಿ ಮುಚ್ಚಿಸಮ್ಮ.' ತಾಯಿ ಮಕ್ಕಳನ್ನು ಕರೆದು ತನ್ನ ಹತ್ತಿರ ಕೂಡ್ರಿಸಿಕೊಂಡಳು. ಬೇಲಿ ದೈನ್ಯ ಸ್ವರದಲ್ಲಿ ಅಂದ: 'ನಾವು ಕಷ್ಟದಾಗ ಅದೇವಿ. ನಿಮ್ಮ ಉಪಕಾರ ಮರಿಯಂಗಿಲ್ಲ. ಹೆಂಗಾದ್ರೂ ಪಾರು ಮಾಡ್ರಿ...'

ಅಷ್ಟರಲ್ಲಿ ಅಜ್ಜಿ ಸ್ವಲ್ಪ ಹೊತ್ತಿನ ಹಿಂದೆ ಕಾರಿನಲ್ಲಿ ಜಿಗಿದು ಕುಳಿತಂತೆ ಇಲ್ಲಿಯೂ ನೆಲದಿಂದ ಮೇಲಕ್ಕೆ ಜಿಗಿದು ಏನೋ ನೆನಪಾದವರಂತೆ ಒಮ್ಮೆಂದೊಮ್ಮೆಲೆ ಚೀರಿದಳು: 'ಹಾಂ! ನನಗ ನೆನಪಾತು. ನನ್ನ ನೆನಪಿನ ಶಕ್ತಿ ಬಾಳ ದೊಡ್ಡದು.. ಅದರ ಆಳ ಕಂಡಹಿಡಿಲಿಕ್ಕೆ ಶಕ್ಯ ಇಲ್ಲ... ನೀ ಯಾರು ಅಂತ ಆಗಿಂದ ನೆನಪು ಮಾಡಿಕೊಳ್ಳಲಿಕ್ಕೆ ಹತ್ತಿದ್ದೆ... ಈಗ ಮಿಂಚ್ ಹೊಳೆದಂಗ ಹೊಳೀತು... ಹಾಂ... ನೀನು ಮಿಸ್‌ಫಿಟ್. ಹೌದಲ್ಲೋ? ಅದೇ ಜೈಲಿನಿಂದ ತಪ್ಪಿಸಿಕೊಂಡಂಥ ಕ್ರಿಮಿನಲ್ ಅಪರಾಧಿ, ಹಾಂ... ಮಿಸ್‌ಫಿಟ್... ಮಿಸ್‌ಫಿಟ್...'

ತನ್ನನ್ನು ಗುರುತು ಹಿಡಿದಿದ್ದಕ್ಕೆ ಆ ದುರುಳನಿಗೆ ಬೇಸರವಾಯಿತಾದರೂ ಮುಖದಲ್ಲಿ ಮುಗುಳ್ನಗೆ ಮೂಡಿಸಿಕೊಂಡ: 'ಹೌದು ಅಜ್ಜಿ, ನೀನು ಹೇಳಿದ್ದು ಖರೆ. ನೀನು ಬಾಳ ಬುದ್ಧಿವಂತೆ ಅದಿ. ನಿನ್ನ ಶ್ಯಾಣೆತನ ಮೆಚ್ಚಿಕೋಬೇಕು... ಆದರ ನೀನು ನನ್ನನ್ನ ಗುರುತು ಹಿಡೀಬಾರದಾಗಿತ್ತು. ಗುರುತು ಹಿಡಿದು ದೊಡ್ಡ ತಪ್ಪು ಮಾಡಿದೀ...'

ಓಹ್ ದೇವರೆ! ತನ್ನ ತಾಯಿ ಎಂಥ ದೊಡ್ಡ ತಪ್ಪು ಮಾಡಿಬಿಟ್ಟಳಲ್ಲ! ಎಲ್ಲಿ, ಏನು ಮಾತಾಡಬೇಕು ಎಂಬುದು ಅವಳಿಗೆ ತಿಳಿಯಲಾರದು. ಬೇಲಿ ತನ್ನ ತಾಯಿಯತ್ತ ತಿರುಗಿ ಒಂದು ಅತ್ಯಂತ ಕೆಟ್ಟ ಬೈಗುಳವನ್ನು ಬೈದ. ಅದನ್ನು ಕೇಳಿ ಮಕ್ಕಳು ಸೇರಿ ಅಲ್ಲಿದ್ದವರಿಗೆಲ್ಲ ಆಶ್ಚರ್ಯವಾಯಿತು. ಒಬ್ಬ ಮಗ ತನ್ನ ತಾಯಿಗೆ ಹೀಗೆಲ್ಲ ಬೈಯ್ಯಬಹುದೆ?

ಮುದುಕಿ ಅಳತೊಡಗಿದಳು. ಮಿಸ್‌ಫಿಟ್‌ನೇ ಈಗ ಮುದುಕಿಗೆ ಸಮಾಧಾನ ಹೇಳಿದ. 'ಅಜ್ಜಿ, ನಿನ್ನ ಮಗನ ಮಾತು ಮನಸಿಗೆ ಹಚ್ಚಿಕೊಳ್ಳಬ್ಯಾಡ. ಅವನೇನು ಬೇಕಂತ ಅಂದಿಲ್ಲ.'

'ಮಿಸ್‌ಫಿಟ್, ದಯವಿಟ್ಟು ನಮಗ ಏನೂ ಕೆಟ್ಟದ್ದು ಮಾಡಬ್ಯಾಡ. ನಿನ್ನ ನೋಡಿದರ ನೀನು ಬಾಳ ಒಳ್ಳೆಯ ಮನುಷ್ಯನಂಗ ಕಾಣ್ತೇದಿ. ಖರೇನ ನೀನು ಒಳ್ಳೆ ಕುಟುಂಬದಿಂದ ಬಂದಿರಬೇಕು...'

'ಹೌದು ಅಜ್ಜಿ, ನನ್ನ ತಂದೆತಾಯಿಗಳಂತಹ ಒಳ್ಳೆ ವ್ಯಕ್ತಿಗಳು ಜಗತ್ತಿನ್ಯಾಗ ಬ್ಯಾರೆ ಇರಲಿಕ್ಕೆ ಸಾಧ್ಯ ಇಲ್ಲ.' ಅಷ್ಟೊತ್ತಿಗೆ ಬಾಬ್ಬಿ ಲೀ ಎನ್ನುವ ಅವನ ಸಹಾಯಕ ತನ್ನ ಪಿಸ್ತೂಲಿನೊಂದಿಗೆ ಬಂದು ನಿಂತ. 'ಏಯ್ ಬಾಬ್ಬೀ, ಬಾರೋ ಇಲ್ಲಿ... ಆ ಮಕ್ಕಳನ್ನು ಸ್ವಲ್ಪ ನೋಡಿಕೋ... ನನಗ ಮಕ್ಕಳನ್ನ ಕಂಡ್ರ ಆಗಂಗಿಲ್ಲ...' ಬೇಲಿ ಅವನಿಗೆ ಅದುಇದು ಹೇಳತೊಡಗಿದ. ಮಿಸ್‌ಫಿಟ್ ಆಗ ತಾನು ಈ ಮುದುಕಿಯ